ರಸ್ತೆಗಳ ದುರಸ್ತಿ ಕಾರ್ಯ

345 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಲೋಕೋಪಯೋಗಿ ಇಲಾಖೆಯ ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯ ರಸ್ತೆಗಳು ಈ ವರ್ಷ ಅತಿಯಾದ ಮಳೆಯಿಂದ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ರಿಪೇರಿಗಾಗಿ ಹೆಚ್ಚಿಗೆ ಹಣವನ್ನು ಒದಗಿಸಿ ಕ್ರಮ ಕೈಗೊಳ್ಳುವರೇ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಈ ಸಾಲಿನ ಅತಿವೃಷ್ಟಿಯಿಂದ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯ 32.64 ಕಿ.ಮೀ. ಉದ್ದದ ರಸ್ತೆಗಳಿಗೆ ಮತ್ತು 33 ಆಡ್ಡ ಮೋರಿಗಳಿಗೆ ಹಾನಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸಂಪರ್ಕಕ್ಕೆ ತೊಂದರೆ ಉಂಟಾಗಿದ್ದ ರಸ್ತೆಯ ಭಾಗಗಳನ್ನು ತಾತ್ಕಾಲಿಕವಾಗಿ ದುರಸ್ತಿಗೊಳಿಸಲಾಗಿದೆ. ತುರ್ತು ದುರಸ್ತಿಗಾಗಿ 12.00 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಸ್ಥಿರವಾದ ದುರಸ್ತಿಗಾಗಿ ಅತಿವೃಷ್ಟಿ ಪರಿಹಾರ ನಿಧಿಯಿಂದ ಹೆಚ್ಚುವರಿ ಅನುದಾನಕ್ಕೆ ಬೇಡಿಕೆ ಸಲ್ಲಿಸಲಾಗಿದೆ. ವಿಷಯವು ಕಂದಾಯ ಇಲಾಖೆಯ ಪರಿಶೀಲನೆಯಲ್ಲಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು, ಮುಜರಾಯಿ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಅಧ್ಯಕ್ಷರ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಸವದತ್ತಿ ತಾಲ್ಲೂಕು ಎಣಗಿ ಮತ್ತು ಮಾಟೊಳ್ಳಿ ಏತ ನೀರಾವರಿ ಯೋಜನೆ

553 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸವದತ್ತಿ ತಾಲ್ಲೂಕಿನ ಮಾಟೊಳ್ಳಿ ಹಾಗೂ ಏಣಗಿ ಗ್ರಾಮಗಳಲ್ಲಿ ಆಗ್‌ಮೆಂಟೇಶನ್ ಆಫ್ ಲಿಫ್ಟ್ ಇರಿಗೇಶನ್ ನೀರಾವರಿ ಯೋಜನೆಗಳನ್ನು ಮೂರು ತಿಂಗಳೊಳಗಾಗಿ ಕೈಕೊಳ್ಳಬೇಕೆಂದು ಹಾಗೂ ಬೇಕಾಗುವ ಹಣವನ್ನು ಸರಕಾರದವರು ಬಿಡುಗಡೆ ಮಾಡಬೇಕೆಂದು ಅಂದಾಜು ಸಮಿತಿಯವರು ಶಿಫಾರಸ್ಸು ಮಾಡಿರುವ ವಿಷಯ ನಿಜವೇ;

ಆ) ಸಮಿತಿಯ ಶಿಫಾರಸ್ಸಿನ ಮೇರೆಗೆ ಸವದತ್ತಿ ತಾಲ್ಲೂಕಿನ ಏಣಗಿ -ಮಾಟೊಳ್ಳಿ ಏತ ನೀರಾವರಿ ಯೋಜನೆಗಳ ಆಗ್‌ಮೆಂಟೇಶನ್ ಕೆಲಸ ಕೈಕೊಳ್ಳಲು ಪ್ರಸ್ತಾವನೆಗಳನ್ನು ಮುಖ್ಯ ಇಂಜಿನೀಯರ್ ನೀರಾವರಿ (ಉತ್ತರ) ಬೆಳಗಾಂವಿ ಇವರಿಗೆ ಕಳುಹಿಸಿದ ವಿಷಯ ನಿಜವೇ;

ಇ) ಸಮಿತಿಯ ಶಿಫಾರಸ್ಸಿನ ಮೇರೆಗೆ ಸರಕಾರದವರು ಕೂಡಲೇ ಆಗ್‌ಮೆಂಟೇಶನ್ ಏತ ನೀರಾವರಿ ಯೋಜನೆಗಳಿಗೆ ಮುಳುಗಡೆ ಪ್ರದೇಶದ ರೈತರ ಅನುಕೂಲತೆಗಾಗಿ ಮಂಜೂರಾತಿ ನೀಡಲಾಗಿದೆಯೇ?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯ ಮಂತ್ರಿಗಳು) :

ಅ) ನಿಜ.

ಆ) ನಿಜ.